ಕರ್ನಾಟಕ ಸರ್ಕಾರ

ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆಯ, ನೃಪತುಂಗ ರಸ್ತೆ, ಬೆಂಗಳೂರು.

ಸಂಖ್ಯೆ:ಸಿ3[1]ಪ್ರಾ.ಶಿ: ಕೆ.ಎ.ಟಿ.32/2017–18 ದಿನಾಂಕ 02.02.2019

**ಜ್ಞಾಪನಾ**

ವಿಷಯ: ಕರ್ನಾಟಕ ಆಡಳಿತ ಮಂಡಳಿಯ ಅರ್ಜಿ ಸಂಖ್ಯೆ 743–774/2014 ದಿನಾಂಕ 16.11.2017 ರಂದು ನೀಡಿರುವ ತೀರ್ಪಿನನುಸಾರ ಕ್ರಮ ಕೈಗೊಳ್ಳುವ ಬಗ್ಗೆ

ಉಲ್ಲೇಖ: 1.ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಚಿತ್ರದುರ್ಗ ಇವರ ಪತ್ರ ಸಂಖ್ಯೆಲೆಕ್ಕಶಾಖೆ/ಪ್ರಾ.ಶಾ.ಶಿ. ಸೇವಾ.ಜೇಷ್ಠತೆ/ಕೆ.ಎ.ಟಿ 3475/2018–19 ದಿನಾಂಕ 09.01.2018

2. ಈ ಕಛೇರಿ ಜ್ಞಾಪನಾ ಸಮಸಂಖ್ಯೆ ದಿನಾಂಕ 26.04.2017

* * * *

ಉಲ್ಲೇಖ 01 ರ ಪತ್ರದೊಂದಿಗೆ ಸಲ್ಲಿಸಿರುವ ಶಿಕ್ಷಕರ ಮನವಿಯನ್ನು ಪರಿಶೀಲಿಸಲಾಗಿ, ಅರ್ಜಿದಾರರು ಕೆಎಟಿ ಅರ್ಜಿ ಸಂಖ್ಯೆ 743–774/2014, **C/W** 568–577/2014 ತೀರ್ಪಿನ ದಿನಾಂಕ 16.11.2017 ರಲ್ಲಿ ಶ್ರೀ ಸುರೇಶ್ ಅರಳಿ ಮತ್ತು ಇತರರ ಪ್ರಕರಣದಲ್ಲಿ ಅರ್ಜಿ 4675–4708/2013 **C/W** 4790–4830/2013 ನೀಡಿರುವ ತೀರ್ಪಿನ್ನು ಅನ್ವಯಿಸಿ ಕ್ರಮವಹಿಸಲು ಗೌರವಾನ್ವಿತ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯು ಆದೇಶ ನೀಡಿದೆ.

ಶ್ರೀ ಸುರೇಶ್ ಅರಳಿ ಮತ್ತು ಇತರರ ಪ್ರಕರಣದಲ್ಲಿ ಉಲ್ಲೇಖಿಸಿರುವ ಶ್ರೀ ಜಿ. ಗುರುಸಿದ್ದಪ್ಪ (ಮೈಸೂರು ಜಿಲ್ಲೆ) ಇವರ ಕೆಎಟಿ ಅರ್ಜಿ ಸಂಖ್ಯೆ 2724–2777/2016 ದಿನಾಂಕ 21.11.2012 ರಂದು ಕರ್ನಾಟಕ ಆಡಳಿತ ನ್ಯಾಯ ಮಂಡಳಿಯ ನೀಡಿದ ತೀರ್ಪಿನ್ನು ಪ್ರಶ್ನಿಸಿ, ರಾಜ್ಯ ಸರ್ಕಾರವು ಈಗಾಗಲೇ ಭಾರತ ಸರ್ವೋಚ್ಚ ನ್ಯಾಯಾಲಯದ ಮುಂದೆ **SLP** ಯನ್ನು ದಾಖಲಿಸಿದೆ. **SLP** ಸಂಖ್ಯೆ 4505–4558/2017 ಆಗಿದೆ.

ಉಲ್ಲೇಖ 02 ರ ಜ್ಞಾಪನಾದಲ್ಲಿ ಕೆಎಟಿ ಅರ್ಜಿ ಸಂಖ್ಯೆ 2724–2777/2016 ದಿನಾಂಕ 21.11.2012 ಉಲ್ಲೇಖಿಸಿರುವ ಕೆಲವು ಸಮಾನಂತರ ಪ್ರಕರಣಗಳಲ್ಲಿ ಆಡಳಿತ ನ್ಯಾಯ ಮಂಡಳಿಯು ನೀಡಿರುವ ತೀರ್ಪಿನ ವಿರುದ್ಧ ಅರ್ಜಿದಾರರು ನ್ಯಾಯಾಲಯ ನಿಂದನಾ ಅರ್ಜಿ ದಾಖಲಿಸಿದಲ್ಲಿ, ರಾಜ್ಯದ ಸರ್ಕಾರದ ವಿಶೇಷ ರಜೆ ಅರ್ಜಿ ಭಾರತ ಸರ್ವೋಚ್ಚ ನ್ಯಾಯಲಯದಲ್ಲಿ ಬಾಕಿ ಇರುವ ವಿಷಯವನ್ನು ಪ್ರಸ್ತಾಪಿಸಿ, ಪ್ರತಿರಕ್ಷಣಾ **(Counter Affidavit)** ಹೇಳಿಕೆ ಸಲ್ಲಿಸಿ ಸರ್ಕಾರದ/ಇಲಾಖೆಯ ಹಿತಕ್ಕೆ ಧಕ್ಕೆಯಾದ ರೀತಿಯಲ್ಲಿ ಕ್ರಮವಹಿಸಲು ಸೂಚನೆಗಳನ್ನು ನೀಡಲಾಗಿರುತ್ತದೆ.

ಪ್ರಸ್ತುತ ಪ್ರಕರಣದಲ್ಲಿಯೂ ಭಾರತ ಸರ್ವೋಚ್ಛ ನ್ಯಾಯಾಲಯದ ತೀರ್ಪು ಹಾಗೂ ಸರ್ಕಾರದ ಆದೇಶವನ್ನು ನಿರೀಕ್ಷಿಸಲು ಸೂಚಿಸಿದೆ. ಒಂದು ವೇಳೆ ಉಪನಿರ್ದೇಶಕರ ಹಂತದಲ್ಲಿ ಶ್ರೀ ಜಿ. ಗುರುಸಿದ್ದಪ್ಪ ಇವರ ಕೆಎಟಿ ಅರ್ಜಿ ಸಂಖ್ಯೆ 2724–2777/2016 ದಿನಾಂಕ 21.11.2012 ಉಲ್ಲೇಖಿಸಿ ಸಮಾನಂತರ ಪ್ರಕರಣಗಳಲ್ಲಿ ನೀಡಿರುವ ತೀರ್ಪಿನ್ನು, ಅಥವಾ ಗ್ರಾಮೀಣ ಕೃಪಾಂಕ ಮತ್ತು ಸಂಬಂಧಿಸಿದ ಎಲ್ಲಾ ಪ್ರಕರಣಗಳಲ್ಲಿ ಸರ್ಕಾರದ ಆದೇಶದ ಹೊರತಾಗಿ ಯಾವುದೇ ಕ್ರಮಗಳನ್ನು ಕೈಗೊಳ್ಳಬಾರದೆಂದು ಸ್ಪಷ್ಟಪಡಿಸಿದೆ. ಸರ್ಕಾರ/ಇಲಾಖೆಯ ಆದೇಶದ ಹೊರತಾಗಿ ಅನುಷ್ಠಾನಗೊಳಿಸಿ ಆರ್ಥಿಕ ನಷ್ಟ ಉಂಟಾಗಲು ಕಾರಣರಾದಲ್ಲಿ, ಅನುಷ್ಠಾನಗೊಳಿಸಿದ ಸಂಬಂಧಿಸಿದ ಅಧಿಕಾರಿಗಳೇ ನೇರ ಜವಾಬ್ದಾರರಾಗಿರುತ್ತಾರೆಂದು ತಿಳಿಸಲಾಗಿದೆ.

(ಎಸ್. ಜಯಕುಮಾರ)
ನಿರ್ದೇಶಕರು(ಪ್ರಾಥಮಿಕ ಶಿಕ್ಷಣ)

ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಚಿತ್ರದುರ್ಗ

ಪ್ರತಿ:–

1. ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಜಿಲ್ಲಾ ಉಪನಿರ್ದೇಶಕರುಗಳಿಗೆ ಅಗತ್ಯ ಕ್ರಮಕ್ಕಾಗಿ
2. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕಲ್ಬುರ್ಗಿ/ಧಾರವಾಡ ಇವರ ಮಾಹಿತಿಗಾಗಿ ಹಾಗೂ ತಮ್ಮ ವ್ಯಾಪ್ತಿಯ ಜಿಲ್ಲೆಗಳ ಉಪನಿರ್ದೇಶರುಗಳಿಗೆ ಅಗತ್ಯ ಸೂಚನೆಗಳನ್ನು ನೀಡಲು ಕೋರಿದೆ.

P.T.O

3. ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ತಾಲ್ಲೂಕು/ವಲಯ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ (ಜಿಲ್ಲಾ ಉಪನಿರ್ದೇಶಕರ ಮೂಲಕ)
4. ಹಿರಿಯ ಸಹಾಯಕ ನಿರ್ದೇಶಕರು, (HRMS) ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರಿಗೆ ಗ್ರಾಮೀಣ ಕೃಪಾಂಕ ವೇತನ/ಮರು ವೇತನ ನಿಗದಿ ಮಾಡಿ, ಕ್ಷೇತ್ರ ಶಿಕ್ಷಣಾಧಿಕಾರಿಗಳು, ಅವರ ಲಾಗಿನ್‌ನಲ್ಲಿ ಅಪ್ ಲೋಡ್ ಮಾಡುವ ಪ್ರಕರಣಗಳನ್ನು ಅನುಮೋದನೆ ನೀಡುವ ಪೂರ್ವದಲ್ಲಿ ಉಪನಿರ್ದೇಶಕರು (ಪ್ರಾಥಮಿಕ ಶಿಕ್ಷಣ) ಅಥವಾ ಸಿಬ್ಬಂದಿ ಶಾಖೆ-3 ನ್ನು ಸಂಪರ್ಕಿಸಿ ಸ್ಪಷ್ಟೀಕರಣ ಪಡೆದು ಕ್ರಮವಹಿಸಲು ಸೂಚಿಸಿದೆ.
5. ಕಛೇರಿ ಪ್ರತಿ.